# ಕರ್ನಾಟಕ ವಿಧಾನ ಪರಿಷತ್ತು

01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1086

02. ಸದಸ್ಯರ ಹೆಸರು : ಡಾ॥ ಯತೀಂದ್ರ ಎಸ್.
(ವಿಧಾನ ಸಭೆಯಿಂದ ಚುನಾಯಿತರಾವರು)

03. ಉತ್ತರಿಸುವ ದಿನಾಂಕ : 25.07.2024

04. ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಗೃಹ ಇಲಾಖೆಯಡಿ ಕಾರ್ಯನಿರ್ವಹಿಸುವ ಪೊಲೀಸ್ ಸಿಬ್ಬಂದಿಗಳಿಗೆ ವಾರಕ್ಕೆ ಅಥವಾ ತಿಂಗಳಿಗೆ ಎಷ್ಟು ದಿನ ರಜೆ ದೊರೆಯುತ್ತದೆ: (ಪದನಾಮವಾರು ವಿವರ ಒದಗಿಸುವುದು) | ಪೊಲೀಸ್ ಅಧಿಕಾರಿ/ಸಿಬ್ಬಂದಿಗಳಿಗೆ ನಿಯಮಾನುಸಾರ ಸಾಂದರ್ಭಿಕ ರಜೆ (ಸಿ.ಎಲ್), ಹಕ್ಕಿನಲ್ಲಿರುವ ಗಳಿಕೆ ರಜೆ/ಪರಿವರ್ತಿತ ರಜೆ ಹಾಗೂ ಕೆ.ಸಿ.ಎಸ್ ನಿಯಮಾವಳಿಯಡಿಯಲ್ಲಿ ನೀಡಲಾಗುವ ವಿಶೇಷ ಸಾಂದರ್ಭಿಕ ರಜೆಗಳನ್ನು ಮಂಜೂರು ಮಾಡಲಾಗುತ್ತಿದೆ.<br>ಅಲ್ಲದೆ, ಇಲಾಖೆಯ ಪಿಸಿ ಮತ್ತು ಹೆಚ್‌ಸಿ ವೃಂದದಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳಿಗೆ ವಾರದ ರಜೆ ಅಥವಾ ವಾರದ ರಜಾ ಭತ್ಯೆಯನ್ನು ಮಂಜೂರು ಮಾಡಲಾಗುತ್ತಿದೆ. ಪಿ.ಸಿ ಮತ್ತು ಹೆಚ್.ಸಿ ರವರಿಗೆ ಮಾಸಿಕ ಕನಿಷ್ಠ ನಾಲ್ಕು ದಿನಗಳ ವಾರದ ರಜೆಯನ್ನು ನೀಡಲು ಎಲ್ಲಾ ಘಟಕಾಧಿಕಾರಿಗಳಿಗೆ ನಿರ್ದೇಶಿಸಲಾಗಿದೆ. |
| ಆ) | ಗೃಹ ಇಲಾಖೆಯಡಿ ಕಾರ್ಯನಿರ್ವಹಿಸುವ ಪೊಲೀಸ್ ಸಿಬ್ಬಂದಿಗಳಿಗೆ ಅಗತ್ಯಕ್ಕೆ ತಕ್ಕಂತೆ ರಜೆ ಸಿಗುತ್ತಿಲ್ಲವಾದಲ್ಲಿ, ಅದನ್ನು ಸರಿದೂಗಿಸುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು: (ವಿವರ ಒದಗಿಸುವುದು) | ಕ್ರಮ ಸಂಖ್ಯೆ (ಅ) ರಲ್ಲಿ ವಿವರಿಸಿರುವಂತೆ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳಿಗೆ ನಿಯಮಾನುಸಾರ ರಜೆಯನ್ನು ಮಂಜೂರು ಮಾಡಲಾಗುತ್ತಿದೆ. |
| ಇ) | ಗೃಹ ಇಲಾಖೆಯ ದಕ್ಷತೆ ಮತ್ತು ಪಾರದರ್ಶಕತೆ ಹೆಚ್ಚಿಸಲು "ಪೊಲೀಸ್ ಸಿಬ್ಬಂದಿ ಸಾಮಾನ್ಯ ರಜಾ ನೀತಿ" ಯ ಅವಶ್ಯಕತೆ ಇದ್ದು, ಈ ಬಗ್ಗೆ ಕ್ರಮ ಕೈಗೊಳ್ಳಲಾಗಿದೆಯೇ? (ವಿವರ ಒದಗಿಸುವುದು) | ಅಧಿಕಾರಿ/ಸಿಬ್ಬಂದಿಗಳಿಗೆ ನೀಡಲಾಗುತ್ತಿರುವ ರಜೆಗಳ ಹೊರತಾಗಿ ಪ್ರಸ್ತುತ ಇಲಾಖೆಯಲ್ಲಿ "ಪೊಲೀಸ್ ಸಿಬ್ಬಂದಿ ಸಾಮಾನ್ಯ ರಜಾ ನೀತಿಯು" ಪರಿಶೀಲನೆಯಲ್ಲಿರುವುದಿಲ್ಲ. |

**HD 170 PPS 2024**

(ಡಾ॥ ಜಿ.ಪರಮೇಶ್ವರ)
ಗೃಹ ಸಚಿವರು